# ಇತಿಹಾಸದ ಹೊಸ ಪುಟಗಳು

ನಾಸಿಕ್ ಜಿಲ್ಲೆಯ ಶಾಲೆಯೊಂದರಲ್ಲಿ ತನ್ನ ಮಗನನ್ನು ಶಾಲೆಯ ಹೊರಗೆ ಕೂರಿಸುತ್ತಾರೆಂದು ಪೋಷಕರೊಬ್ಬರು ನೀಡಿದ ದೂರನ್ನು ಪರಿಶೀಲಿಸಲು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಆ ಶಾಲೆಗೆ ಹೋದರು. ಆದರೆ ಆ ಶಾಲೆಯ ಮುಖ್ಯೋಪಾಧ್ಯಾಯ ಅಂಬೇಡ್ಕರ್ ಅವರನ್ನೂ ಶಾಲೆಗೆ ಬಿಟ್ಟುಕೊಳ್ಳಲಿಲ್ಲ! 1927ರ ಅವಧಿಯಲ್ಲಿ ಮಹಾಡ್ ಪಟ್ಟಣದ 'ಚವದಾರ್' ಕೆರೆಯ ನೀರನ್ನು ಅಸ್ಪೃಶ್ಯ ಸಮುದಾಯದವರು ಬಳಸುವಂತಿರಲಿಲ್ಲ! ಆಗ ಬಾಬಾ ಸಾಹೇಬ್ ಅವರು ನೀರನ್ನು ಕುಡಿಯುವುದು ನಮ್ಮೆಲ್ಲರ ಹಕ್ಕು. ಇದಕ್ಕೆ ಕಾನೂನಿನ ಬೆಂಬಲವಿದೆ ಎಂಬುದನ್ನು ಸಾರ್ವಜನಿಕರೆದುರಿನಲ್ಲಿ ಪ್ರದರ್ಶಿಸಲು ನಿರ್ಧರಿಸಿದರು. ಅಂದಿಗೆ ಸುಮಾರು ಐದು ಸಾವಿರ ಜನರೊಂದಿಗೆ ಮೆರವಣಿಗೆಯಲ್ಲಿ ಬಂದು ಮಹಾಡ್‌ನ 'ಚವದಾರ್' ಕೆರೆಯ ನೀರನ್ನು ಬೊಗಸೆಯಲ್ಲಿ ನೀರು ಕುಡಿಯುವುದರ ಮೂಲಕ ತಮ್ಮ ಹಕ್ಕನ್ನು ಪ್ರತಿಷ್ಠಾಪಿಸಿದರು. ಆದರೆ ಅದರ ನಂತರ ಆ ಊರಿನ ಸವರ್ಣೀಯರು ಸಭೆ ಸೇರಿ 'ಪವಿತ್ರವಾದ ಗಂಗೆಗೆ ಮಲಿನವಾಗಿದೆ', ಆದ್ದರಿಂದ ಗಂಗೆಯನ್ನು ಪವಿತ್ರೀಕರಿಸಬೇಕೆಂದು 108 ಕೊಡಗಳಷ್ಟು ನೀರನ್ನು ಕೆರೆಯಿಂದ ಹೊರತೆಗೆದರು. ಊರಿನ ಎಲ್ಲ ಮನೆಯಿಂದಲೂ ಸಗಣಿ–ಮತ್ತು ಹಸುವಿನ ಗಂಜನ್ನು ಸಂಗ್ರಹಿಸಿ ಅದಕ್ಕೆ ಹಾಲು–ಮೊಸರು ಮಿಶ್ರಣ ಮಾಡಿ ಚವದಾರ್ ಕೆರೆಯಲ್ಲಿ ಸುರಿದರು. ಅಲ್ಲಿಗೆ 'ಗಂಗೆ' ಶುದ್ಧಿಯಾದಳು!

ಮನುಷ್ಯರ ಸ್ಪರ್ಶಕ್ಕಿಂತ ಹಸು–ಎತ್ತುಗಳ ಸಗಣಿ–ಮೂತ್ರಗಳು ಹೆಚ್ಚು ಪವಿತ್ರವೆಂಬ ಭಾವನೆ ಹೆಚ್ಚಾಗಿರುವ ಈ ಸಮಾಜದಲ್ಲಿ ಇದಕ್ಕಿಂತ ಭಿನ್ನವಾದ ನಡೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. 1933ರಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಸ್ಪೃಶ್ಯ ಸಮುದಾಯದವರ ಮಂದಿರ ಪ್ರವೇಶದ ಮಸೂದೆಯ ಬಗ್ಗೆ ನಡೆದ ಸಭೆಯೊಂದರಲ್ಲಿ ಸ್ಪಷ್ಟವಾಗಿ ಹೇಳಿದರು 'ದೇವರ ಪೂಜೆಗಿಂತ ಹೊಟ್ಟೆತುಂಬ ಅನ್ನ ದೊರೆಯುವುದು ಮಹತ್ವದ ಸಂಗತಿ. ನಮಗೆ ಕೇಡಾದದ್ದು ಇತರ ಜನರ ಸ್ವಾರ್ಥ ಸಾಧನೆಯ ಕಾರಣದಿಂದ. ದೈವಾಲಂಬಿಗಳಾಗಿ ಬದುಕಲು ಕಲಿಯಬೇಡಿ. ನಿಮ್ಮ ತೋಳ್ಬಲವನ್ನು ನಂಬಿ ನಡೆಯಿರಿ'.

ಇದೆಲ್ಲ ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಪ್ರತಿದಿನ ನಡೆಯುತ್ತಿರುವ ಹೇಯ ವಿದ್ಯಮಾನವಾಗಿದೆ. ದಲಿತ ಸಮುದಾಯದ ಶಾಲಾ ಬಾಲಕನೊಬ್ಬ ದೇವರನ್ನು ಮುಟ್ಟಿದ ಎನ್ನುವ ಕಾರಣಕ್ಕೆ ಆ ಕುಟುಂಬಕ್ಕೆ ಸಾವಿರಾರು ರೂಪಾಯಿ ಕೊಡಬೇಕೆಂದು ಊರಿನವರು ದಂಡ ವಿಧಿಸಿದರು. ಇನ್ನೊಂದು ಗ್ರಾಮದಲ್ಲಿ ದಲಿತ ಸಮುದಾಯದವರು ಕುಡಿಯುವ ನೀರಿನ ಟ್ಯಾಂಕಿಗೆ ಸವರ್ಣೀಯರು ವೈಷಮ್ಯದಿಂದ ಮಲ ಬೆರೆಸಿದರು. ಮಾನವತೆಗೆ ಚ್ಯುತಿ ತರುವಂತಹ ಇಷ್ಟೆಲ್ಲ ಕೊಳಕುಗಳನ್ನು ತನ್ನೊಳಗಿಟ್ಟುಕೊಂಡಿರುವ ಸಮಾಜ ಎಲ್ಲರೊಂದಿಗೆ ಕೂಡಿ ಬಾಳಲು ಅರ್ಹವಲ್ಲ! ಕೆಳ ಸಮುದಾಯಗಳ ಮೇಲೆ ಮಾಡುವ ಇಂತಹ ಆಳವಾದ ಅಪಮಾನದ ಗಾಯಗಳು ಚರಿತ್ರೆಯಲ್ಲಿ ಎಂದೂ ಮಾಯಲಾರವು.

ಈಚೆಗೆ ಗ್ರಾಮವೊಂದರ ದೇವಾಲಯಕ್ಕೆ ದಲಿತ ಸಮುದಾಯದವರು ಪ್ರವೇಶಿಸಿದ್ದರಿಂದ 'ನಮ್ಮ ದೇವರು ಅಪವಿತ್ರಗೊಂಡಿದೆ' ಎಂದು ಭಾವಿಸಿದ ಆ ಊರಿನ ಜನ ಅಲ್ಲಿದ್ದ ದೇವರನ್ನೇ ಬೇರೆ ಕಡೆಗೆ ಸಾಗಿಸಿದರು! ಮಾನವತೆ ಸತ್ತ ಸಮಾಜವೊಂದು ಮಾತ್ರ ಈ ರೀತಿಯಾಗಿ ವರ್ತಿಸಬಲ್ಲದು! 'ನಾವೆಲ್ಲರೂ ಒಂದು', 'ವಸುದೈವ ಕುಟುಂಬಕಂ' ಇಂತಹ ಮಾತುಗಳನ್ನು ಗಿಳಿಪಾಠದಂತೆ ಹೇಳುತ್ತಿರುವವರ ಮಾತುಗಳನ್ನು ನಾವು ಅನುದಿನವೂ ಕೇಳುತ್ತಿದ್ದೇವೆ. ಮೂಲಭೂತವಾಗಿ ಎಲ್ಲ ಧರ್ಮಗಳೂ ತಮ್ಮ ನಡೆ–ನುಡಿಗಳಲ್ಲಿ ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಘಟನೆಗಳು ರಾಜಾರೋಷವಾಗಿ ನಡೆಯುತ್ತಿವೆ. ಇದನ್ನೇ ಅಂಬೇಡ್ಕರ್ ಅವರು ಕಾನೂನು ಪ್ರಶ್ನೆಗಿಂತ ನೈತಿಕತೆ, ಮಾನವತೆಯನ್ನೇ ಮುಂದು ಮಾಡಿ 'ಮಂದಿರ ಪ್ರವೇಶದಂಥ ಕ್ಷುಲ್ಲಕ ವಿಷಯದಲ್ಲಿ ಅಸ್ಪೃಶ್ಯರು ತಮ್ಮ ಶಕ್ತಿ–ಸಾಮರ್ಥ್ಯಗಳನ್ನು ವ್ಯಯಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಉನ್ನತ ಶಿಕ್ಷಣ, ನೌಕರಿಯಲ್ಲಿ ಉನ್ನತ ಸ್ಥಾನ ಹಾಗೂ ನಿತ್ಯ ಜೀವನದ ಅವಶ್ಯಕತೆಗಳ ಪೂರೈಕೆಯಿಂದ ಮಾತ್ರ ಅಸ್ಪೃಶ್ಯರ ಉದ್ಧಾರವಾದೀತು ಹಾಗೂ ಸ್ಪೃಶ್ಯ ವರ್ಗದ ಜನರು ಅಸ್ಪೃಶ್ಯರ ಕಡೆಗೆ ನೋಡುವ ದೃಷ್ಟಿಕೋನದಲ್ಲೂ ಬದಲಾವಣೆಯಾದೀತು. ಮಂದಿರಗಳ ಬಾಗಿಲು ತೆರೆಯುವುದು ಬಿಡುವುದು ನಿಮ್ಮ ಇಚ್ಛೆ. ಮನುಷ್ಯತ್ವಕ್ಕೆ ಬೆಲೆಯಿದೆ ಎಂಬುದಾದರೆ ಮಂದಿರ ಪ್ರವೇಶಕ್ಕೆ ಅವಕಾಶ ನೀಡಿ' ಎಂದು ಹೇಳಿದರು.

ಈ ಅವಧಿಯಲ್ಲಿಯೇ (1928) ಕುವೆಂಪು ಅವರು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಯನ್ನೇ ಒಳಗೊಂಡ 'ಜಲಗಾರ' ಎಂಬ ಕ್ರಾಂತಿಕಾರಕ ನಾಟಕವನ್ನು ರಚಿಸಿದ್ದು ಚಾರಿತ್ರಿಕ ಸಂಗತಿ. ನಾಟಕದ ಜಲಗಾರ ರೈತನೊಬ್ಬನಿಗೆ 'ಶಿವನ ಕಾಣಲು ನೀನು ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು? ಉಳುವಾಗ, ನೆಡೆವಾಗ ಪೂಜೆ ಮಾಡುವೆ ನೀನು. ದೇಗುಲದ ಪೂಜಕನು ಬೈಗಿನಲಿ ಬೆಳಗಿನಲಿ ಪೂಜಿಸಿದರೇನಂತೆ? ನಮ್ಮ ಜೀವವೆ ನಿಚ್ಚ ಪೂಜೆ' ಎಂದು ಹೇಳಿದ. ಅದಕ್ಕೆ ಶಿವ ಹೇಳಿದ 'ಜಲಗಾರ ಶಿವನು ಶಿವಗುಡಿಯ ಪೀಠದಲಿ ಎಂದೆಂದಿಗೂ ಇಲ್ಲ! ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ! ಉಳುತ್ತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ!'. ಇವೆಲ್ಲ ಕನ್ನಡ ಪರಂಪರೆ ನಮ್ಮ ಮುಂದಿರಿಸಿರುವ ಮಾನವತೆಯ ಲೋಕ ಸತ್ಯಗಳು.

ಇದೆಲ್ಲವನ್ನೂ ಅನುಭವಿಸಿದ್ದರಿಂದಲೇ ಬಾಬಾ ಸಾಹೇಬ್ ಅಂಬೇಡ್ಕರ್ ಹಿಂದೂ ಧರ್ಮದ ಬಗ್ಗೆ ಅವರ ನಿಲುವು ಕಠಿಣಗೊಳ್ಳುತ್ತಾ ಬಂದಿತು. ಆದ್ದರಿಂದಲೇ ಅಂಬೇಡ್ಕರ್ ಹೇಳಿದರು 'ಧರ್ಮ ಮನುಷ್ಯನಿಗಾಗಿ ಇರುತ್ತದೊ ಅಥವಾ ಮನುಷ್ಯ ಧರ್ಮಕ್ಕಾಗಿ ಇರುತ್ತಾನೊ? ನಾವು ಹಿಂದೂ ಧರ್ಮದ ಘಟಕ ಅಹುದೊ; ಅಲ್ಲವೊ ಎಂಬುದರ ಇತ್ಯರ್ಥವಾಗಲೇಬೇಕು' ಎಂದು ಆಗ್ರಹಿಸಿ 'ಬಹಿಷ್ಕೃತ ಭಾರತ'ದಲ್ಲಿ ಬರೆದಿದ್ದರು. ಧರ್ಮಗಳಲ್ಲಿದ್ದ ಇಂತಹ ವೈರುಧ್ಯಗಳನ್ನು ಗಮನಿಸಿಯೇ ಲೇಖಕ ಕೌಂಟ್ ಲಿಯೊ ಟಾಲ್‌ಸ್ಟಾಯ್ ಚರ್ಚ್ ಅನ್ನೇ ತಿರಸ್ಕರಿಸಿದ. 'ನಿಮ್ಮ ದಿನನಿತ್ಯದ ಬದುಕೇ ನಿಮ್ಮ ದೇವಾಲಯ, ನಿಮ್ಮ ಧರ್ಮ' ಎಂದು ಖಲೀಲ್ ಗಿಬ್ರಾನ್ ಹೇಳಿದ. ಸಾವಿರಾರು ವರ್ಷಗಳಿಂದ ಈ ದೇಶದ ಶೂದ್ರರ ಮಿದುಳನ್ನು ಪುರೋಹಿತಶಾಹಿ ವಶಪಡಿಸಿಕೊಂಡಿದೆ. ಆದ್ದರಿಂದಲೇ ಮೊದಲು ಜನರನ್ನು ಪುರೋಹಿತಶಾಹಿ ಬಂಧನದಿಂದ ಮುಕ್ತಗೊಳಿಸಬೇಕೆಂದು ಅಂಬೇಡ್ಕರ್ ಪುನರುಚ್ಚರಿಸುತ್ತಿದ್ದರು. ಇದನ್ನೆಲ್ಲಾ ಗಮನಿಸುತ್ತಿದ್ದ ಒಬ್ಬ ಪ್ರಯಾಣಿಕ 1932ರಲ್ಲಿ ಅಂಬೇಡ್ಕರ್ ಅವರನ್ನು ಕುರಿತು ಹೇಳಿದ 'ಭಾರತದ ಇತಿಹಾಸದ ಹೊಸ ಪುಟಗಳನ್ನು ಬರೆಯುವ ಯುವ ನಾಯಕ ಇವನೆ'.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ವಿದ್ಯೆ ಒಂದೊಂದು ಕಡೆ ಒಂದೊಂದು ಬಗೆಯ ಹಣ್ಣು ಕೊಡುತ್ತದೆ.
  —ಪಂಜೆ ಮಂಗೇಶರಾವ್
- ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ.
  —ಕುವೆಂಪು
- ಬದುಕಿ, ಸಹಜೀವಿಗಳನ್ನು ಬದುಕಲು ಬಿಡಿ ಎಂಬುದೇ ನಮ್ಮ ಜೀವನದ ಮಂತ್ರವಾಗಬೇಕು.
  —ಮಹಾತ್ಮ ಗಾಂಧೀಜಿ
- ಧನವಿದ್ದವರೇ ಧನಿಕರಲ್ಲ, ಜ್ಞಾನವೇ ಧನದ ನಿಧಿ.
  —ಪಂಡಿತ ತಾರಾನಾಥ
- ಧರ್ಮ ಎಂಬುದು ಭಗವಂತ ಮತ್ತು ಮನುಷ್ಯನ ಬಗ್ಗೆ ಪ್ರೀತಿಯಲ್ಲದೆ ಬೇರೇನೂ ಅಲ್ಲ.
  —ಶಂಕರಾಚಾರ್ಯ
- ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.
  —ಶಿವರಾಮ ಕಾರಂತ
- ಪ್ರತಿಭೆಗೆ ಶಾಸ್ತ್ರ ಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.
  —ತ.ರಾ.ಸು
- ದೈವ ಸಹಾಯವಿಲ್ಲದೆ ಜಯವಿಲ್ಲ, ಸ್ವಪ್ರಯತ್ನವಿಲ್ಲಗೆ ದೈವ ಸಹಾಯವೂ ಇಲ್ಲ.
  —ಡಿವಿಜಿ